

ಯೂರೋಪ್‌ನ ಹೆಚ್‌ಕೆಯು ವಿವಿಯಲ್ಲಿ ನಡೆದ ಸಂಗೀತ ಕಾರ್ಯಾಗಾರದಲ್ಲಿ ಭಾಗವಹಿಸಿದ ಕಲಾವಿದರು

# ನೆಲ ಹೊತ್ತಿ ಉರಿದೆಡೆ ಸಂಗೀತ ಸಿಂಚನ

ಯೂರೋಪ್‌ನ ಎಲ್ಲ ದೇಶಗಳಲ್ಲೂ ಭಾರತೀಯ ಸಂಗೀತಕ್ಕೆ ತುಡಿಯುವ ಸಹೃದಯ ಮನಸ್ಸುಗಳಿವೆ. ಸುಮಾರು ಒಂದು ತಿಂಗಳಿಗೂ ಹೆಚ್ಚು ಕಾಲ ಯೂರೋಪಿನಾದ್ಯಂತ ಪಿಟೀಲು ಕಛೇರಿ, ಸಂಗೀತ ಶಿಬಿರ, ಕಾರ್ಯಾಗಾರ, ಪ್ರಾತ್ಯಕ್ಷಿಕೆಗಳಲ್ಲಿ ಭಾಗವಹಿಸಿದ ಖ್ಯಾತ ವಯೊಲಿನ್ ವಾದಕ ಮೈಸೂರು ಮಂಜುನಾಥ್ ಅವರು ತಮ್ಮ ಸಂಗೀತ ಯಾತ್ರೆಯ ಅನುಭವ ಕಥನವನ್ನು 'ಸುಧಾ'ದೊಂದಿಗೆ ಹಂಚಿಕೊಂಡಿದ್ದಾರೆ.

■ ನಿರೂಪಣೆ: **ಉಮಾ ಅನಂತ್**

ವಿದೇಶಿಗರಿಗೆ ಭಾರತೀಯ ಸಂಗೀತ ಎಂದರೆ ಎಲ್ಲಿಲ್ಲದ ಕುತೂಹಲ. ರಾಗ–ತಾಳಗಳು ಮೇಳೈಸಿ ಮಧುರಾತಿಮಧುರವಾಗಿ ಹೊಮ್ಮುವ ನಾದದಲೆ ಆಲಿಸುವುದೇ ಪರಮಾನಂದ. ವಿದೇಶಗಳಲ್ಲಿ ಸಂಗೀತ ಕಛೇರಿ ನೀಡುವುದು, ಸಂಗೀತ ಕಾರ್ಯಾಗಾರ, ಉಪನ್ಯಾಸ, ಪ್ರಾತ್ಯಕ್ಷಿಕೆಗಳಲ್ಲಿ ಭಾಗವಹಿಸುವುದು ರೋಚಕ ಅನುಭವಗಳನ್ನು ನೀಡುತ್ತದೆ. ಲಂಡನ್‌ನಲ್ಲಿರುವ ಭಾರತೀಯ ವಿದ್ಯಾಭವನ ಸಭಾಂಗಣದಲ್ಲಿ ಈಚೆಗೆ ಒಂದು ವಿಶೇಷವಾದ ಉತ್ಸವ ನಡೀತು. ಸಂಸ್ಥೆಯ ಐವತ್ತನೇ ವರ್ಷದ ಉತ್ಸವ, ಮುಕ್ತಾಯದ ದಿನದ ಕಛೇರಿಗೆ ನನಗೆ ಹಾಗೂ ನನ್ನಣ್ಣ ಮೈಸೂರು ನಾಗರಾಜ್ ಅವರಿಗೆ ಪಿಟೀಲು ನುಡಿಸಲು ಆಹ್ವಾನ ಬಂತು. ನಾವು ಅಲ್ಲಿ ಹೋಗಿ ವಿಶೇಷ ಕಾರ್ಯಾಗಾರ–ಕಛೇರಿ ನಡೆಸಿಕೊಟ್ಟೆವು.

ಅದಾಗಿ ಅಲ್ಲಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ನಮ್ಮ ಕಾರ್ಯಕ್ರಮ. ಅಲ್ಲಿ ಪಾಶ್ಚಾತ್ಯ ಸಂಗೀತದ ದೊಡ್ಡ ಸಂಗೀತ ವಿಭಾಗ ಇದೆ. ವರ್ಕ್‌ಶಾಪ್ ಆದ ಮೇಲೆ ಕಛೇರಿ ಕೊಟ್ವಿ. ಭಾರತೀಯ ಸಂಗೀತದ ವೈಶಿಷ್ಟ್ಯವೇನು? ಅದು ಹಿಂದೂಸ್ತಾನಿ ಇರಲಿ, ಕರ್ನಾಟಕ ಸಂಗೀತವೇ ಇರಲಿ. ಇದರಲ್ಲಿ ಮನೋಧರ್ಮ ಏಕೆ ವಿಜೃಂಭಿಸುತ್ತದೆ? ರಾಗಗಳ ಭಾವ ಯಾವುದು? ಯಾವುದೇ ಸ್ಕ್ರಿಪ್ಟ್ ಇಟ್ಟುಕೊಳ್ಳದೆ ಒಂದು ರಾಗವನ್ನು ಗಂಟೆಗಟ್ಟಲೆ ನುಡಿಸೋದು ಹೇಗೆ? ಎಂಬ ಎಲ್ಲ ವಿಚಾರಗಳನ್ನು ತಿಳಿದುಕೊಳ್ಳುವ ಕುತೂಹಲ ಅಲ್ಲಿನ ಜನರಿಗೆ. ಇವನ್ನೆಲ್ಲ ವಿಸ್ತಾರವಾಗಿ ತಿಳಿಸಿ ಅದನ್ನು ಪ್ರಾಯೋಗಿಕವಾಗಿ ನುಡಿಸಿ ತೋರಿಸಿದಾಗ ನೆರೆದವರಿಗೆ ಅಚ್ಚರಿ.

ಮುಂದೆ ನಮ್ಮ ಸರಣಿ ಕಛೇರಿ ಸುಮಂತ್ ಪಿಟೀಲು, ಬಿ.ಸಿ. ಮಂಜುನಾಥ್ ಅವರ ಮೃದಂಗ ಸಹಕಾರದೊಂದಿಗೆ ಯಶಸ್ವಿಯಾಗಿ ನಡೆಯಿತು. ಹಾಗೆ ನೋಡಿದರೆ ಯೂರೋಪ್